# ಕೆಂದುಹೂಗಳ ಬತ್ತಳಿಕೆ

■ ಚಿತ್ರ– ಬರಹ:
**ಬಿ.ರಾಮಪ್ರಸಾದ್ ಭಟ್**





ರುಬಿಯೆಸಿಯೆ ಕುಟುಂಬದ ಹೂಬಿಡುವ ಇಕ್ಸೋರಾ ಸಂಕುಲದ ಸುಮಾರು 500ಕ್ಕೂ ಅಧಿಕ ಜಾತಿಯನ್ನು ಹೊಂದಿರುವ ಸಸ್ಯಗಳಲ್ಲಿ ಕೆಂಪು ಹೂಗಳನ್ನು ಗುಂಪಾಗಿ ಬಿಡುವ ಪೊದೆಯಂತಿರುವ ಸಸ್ಯವೇ 'ಇಕ್ಸೋರಾ ಕೊಕೀನಿಯಾ'.

ಇದನ್ನು 'ಜಂಗಲ್ ಜೆರೆನಿಯಮ್' (ಕಾಡಿನ ಕಿಡಿ) ಎಂದೂ ಕರೆಯುವುದುಂಟು. ದಕ್ಷಿಣ ಭಾರತ ಮತ್ತು ಶ್ರೀಲಂಕಾದ ಪ್ರದೇಶಗಳಲ್ಲಿ ಹೆಚ್ಚಾಗಿ ಮನೆಯ ಮುಂದೆ ಅಥವಾ ತೋಟಗಳಲ್ಲಿ ಈ ಗಿಡವನ್ನು ಅಲಂಕಾರಕ್ಕೆ ಬೆಳೆಸುತ್ತಾರೆ. ಉಷ್ಣಪ್ರದೇಶಗಳಲ್ಲೂ ಇದು ಬೆಳೆಯುತ್ತದೆ. ದಕ್ಷಿಣ ಫ್ಲೋರಿಡಾದ ತೋಟಗಳಲ್ಲಿ ಈ ಹೂವಿನ ಪೊದೆಗಳು ಸರ್ವೇಸಾಮಾನ್ಯವಾಗಿ ನೋಡಲು ಸಿಗುತ್ತವೆ. ದಟ್ಟವಾದ ಈ ಹಚ್ಚಹಸಿರಿನ ಪೊದೆ ವರ್ಷಪೂರ್ತಿ ಹೂಗಳನ್ನು ಬಿಡುತ್ತದೆ.

ಈ ಸಸ್ಯವು 4ರಿಂದ 12 ಅಡಿ ಎತ್ತರದವರೆಗೂ ಬೆಳೆಯುತ್ತದೆ. ಸುಮಾರು 10 ಸೆಂಟಿಮೀಟರ್ ನಷ್ಟು ಉದ್ದದ ಎಲೆಗಳನ್ನು ಹೊಂದಿರುತ್ತದೆ. ಇದೇ ಪ್ರಭೇದದ ಹಳದಿ, ಗುಲಾಬಿ, ಕೇಸರಿ ಬಣ್ಣದ ಹೂಬಿಡುವ ಸಸ್ಯಗಳೂ ಕಂಡುಬರುತ್ತವೆ. ಅವುಗಳಿಗೆ ಬೇರೆ ಹೆಸರುಗಳಿರುತ್ತವೆ. ಕಳೆದ ಕೆಲವು ದಶಕಗಳಿಂದೀಚೆಗೆ ಇದರ ಹೈಬ್ರಿಡ್ ತಳಿಗಳೂ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ.

ಈ ಗಿಡದ ಹೂ, ಎಲೆ, ಬೇರು, ತೊಗಟೆಯನ್ನು ಆಯುರ್ವೇದ ವೈದ್ಯಪದ್ಧತಿಯಲ್ಲಿ ಬಳಸಲಾಗುತ್ತಿದೆ. ಕಳಿತ ಹಣ್ಣನ್ನು ಆಹಾರದ ಜೊತೆಗೆ ಬಳಸುತ್ತಾರೆ. ಔಷಧ ವಿಜ್ಞಾನದದ ಪ್ರಕಾರ, ಇದೊಂದು ಅತ್ಯುತ್ತಮ 'ಆ್ಯಂಟಿ ಆಕ್ಸಿಡೆಂಟ್'. ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡಬಲ್ಲದು. ಜೀರ್ಣಾಂಗವ್ಯೂಹದ ಸುಸ್ಥಿತಿಗೆ ಸಹಾಯಕವಾಗಿದೆ. ಅತಿಸಾರಬೇಧಿಯನ್ನೂ ತಡೆಯುತ್ತದೆ.

ಈ ಸಸ್ಯದಲ್ಲಿ ಲುಪಿಯೋಲ್, ಅರ್ಸೋಲಿಕ್ ಆಮ್ಲ, ಒಲಿಯನೋಲಿಕ್ ಆಮ್ಲ, ಸೈಟೋಸಿರಾಲ್, ರುಟಿನ್, ಲೆಕೋಸೈನಡಿನ್, ಆ್ಯಂಥೋಸೈಯನಿನ್ಸ್, ಪ್ರೊಆ್ಯಂಥೋಸೈನಡಿನ್ ಮುಂತಾದ ರಾಸಾಯನಿಕಗಳಿರುವುದೂ ಪತ್ತೆಯಾಗಿದೆ. ●